ಅ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭವಾಗಿರುವುದು ?

ಇ) ೧೯೮೨ರಲ್ಲಿ ಬಿಜಾಪುರದ ಜಿಲ್ಲಾಧಿಕಾರಿಯವರು ಮಹಿಳೆಯರ ಪ್ರವೇಶದ ನಿಯಮಾವಳಿಯನ್ನು ಬದಲಿಸಿರುವುದು ನಿಜವೆ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಇದೆ.

ಆ) ೨೧-೯-೧೯೬೫.

ಇ) ನಿಜ. ದಿನಾಂಕ ೨೧-೯-೧೯೮೨ರಲ್ಲಿ ಶ್ರೀ ಡಿ. ಸೋಮಪ್ಪ ಅಧ್ಯಕ್ಷರು, ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿಧಾನ ಮಂಡಲ ಸಮಿತಿ ಕೂಡ್ಲಗಿ, ಇವರು ಸದರಿ ಕೇಂದ್ರಕ್ಕೆ ಭೇಟಿ ಕೊಟ್ಟು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಸಂಖ್ಯೆಯನ್ನು ಶೇ ೩೬ರಿಂದ ಶೇ ೭೫ಕ್ಕೆ ಹೆಚ್ಚಿಸಬೇಕೆಂದು ಶಿಫಾರಸ್ಸು ಮಾಡಿದುದರಿಂದ, ಹಾಗೂ ಈ ಕೇಂದ್ರವನ್ನು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲು ಶಿಫಾರಸ್ಸು ಮಾಡಿದ್ದರಿಂದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಸಂಖ್ಯೆಯನ್ನು ಶೇ ೭೫ಕ್ಕೆ ಹೆಚ್ಚಿಸಿ ಸದರಿ ಕೇಂದ್ರವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ.

ಬಗರ್ ಹುಕುಂ ಸಾಗುವಳಿ

೭೮೮. ಶ್ರೀ ಪಂಪಾಪತಿ (ದಾವಣಗೆರೆ). ಮಾನ್ಯ ಕಂದಾಯ ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಒಟ್ಟು ಬಗರ್ ಹುಕುಂ ಸಾಗುವಳಿ ಮಾಡುವವರ ಸಂಖ್ಯೆ ಎಷ್ಟು ?

ಆ) ಅವರು ಸಾಗುವಳಿ ಮಾಡುತ್ತಿರುವ ಜಮೀನೆಷ್ಟು ?

ಇ) ಈ ಬಗರ್ ಹುಕುಂ ಸಾಗುವಳಿದಾರರಿಗೆ ಪಟ್ಟಕೊಡುವ ಬಗ್ಗೆ ಸರ್ಕಾರದ ಕಾರ್ಯಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ೨, ೧೩, ೪೩೭.

ಆ) ೩, ೮೭, ೮೪೭ ಎಕರೆ ೦೬ ಗುಂಟೆ ಜಮೀನು.

ಇ) ಈ ಬಗ್ಗೆ ಭೂ ಕಂದಾಯ ಅಧಿನಿಯಮ ೧೯೬೪ರ ಸೆಕ್ಷನ್ ೯೪ಕ್ಕೆ ತಿದ್ದುಪಡಿ ಮಸೂದೆಯನ್ನು ವಿಧಾನ ಮಂಡಲದ ಮುಂದೆ ಇರುವುದು. ಅದು ಜಾರಿಯಾದ ನಂತರ ಆ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದ ಬೀಡಿ ಕಾರ್ಮಿಕರ ಸಂಖ್ಯೆ

೭೮೯. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಬೀಡಿ ಕಾರ್ಮಿಕರು ಎಷ್ಟು ?

ಆ) ಇವರಲ್ಲಿ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರೆಷ್ಟು ?

ಇ) ಇವರಿಗೆ ಕನಿಷ್ಠ ಕೂಲಿ ನಿಗದಿಪಡಿಸುವ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮವೇನು ?